CW.2 PW.2

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.604/2019

| | |
|---|---|
| ಸಾಕ್ಷಿದಾರರ ಹೆಸರು | ಆಶಾ ಉಃಹುಚ್ಚಮ್ಮ |
| ಗಂಡನ ಹೆಸರು | ಹರೀಶ್ |
| ವಯಸ್ಸು | 36 ವರ್ಷ |
| ವೃತ್ತಿ | ಖಾಸಗಿ ಕೆಲಸ |
| ವಿಳಾಸ | ಬೆಂಗಳೂರು |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 18.06.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

1ನೇ ಆರೋಪಿ ನನ್ನ ಗಂಡನಾಗಿದ್ದು ಅವರು ತೀರಿಕೊಂಡಿರುತ್ತಾರೆ. 2 ಮತ್ತು 3 ನೇ ಆರೋಪಿ ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದು ಅವರು ನನ್ನ ಅತ್ತೆ ಹಾಗೂ ಸಂಬಂಧಿಯಾಗುತ್ತಾರೆ. 4ನೇ ಆರೊಪಿ ತೀರಿಕೊಂಡಿರುತ್ತಾರೆ. ಚಾಸಾ-1 ನನ್ನ ಅಣ್ಣ. ಚಾಸಾ-3 ರಿಂದ 9 ರವರ ಪರಿಚಯವಿರುತ್ತದೆ.

ದಿಃ30.04.2018 ರಲ್ಲಿ ನನ್ನ ಯಜಮಾನರು ನನ್ನ ಅತ್ತೆ ಹಾಗೂ ತಮ್ಮಯ್ಯಣ್ಣ ಹಾಗೂ ದಾಸಣ್ಣ ರವರು ನನ್ನನ್ನು ನಾನು ಮಾಡುವ ಎಲ್ಲಾ ಕೆಲಸದಲ್ಲೂ ತಪ್ಪು ಹುಡುಕಿ ಹಾಗೂ ತವರು ಮನೆಯಿಂದ ವರದಕ್ಷಿಣೆ ತರಲು ಒತ್ತಾಯ ಮಾಡಿ ಹೊಡೆದಿರುತ್ತಾರೆ. ನನ್ನ ಗಂಡ ಹಾಗೂ ನನ್ನ ಅತ್ತೆ ನನ್ನನ್ನು ಅವರ ಮನೆಯಲ್ಲಿ ಇರಲು ಬಿಡುತ್ತಿರಲಿಲ್ಲ ಯಾವಾಗಲೂ ತವರು ಮನೆಗೆ ಕಳುಹಿಸುತ್ತಿದ್ದರು. ನಾನು ಮತ್ತೆ ಬಂದು ಗಂಡನ ಮನೆಗೆ ಇರಲು ಬಂದಾಗ ಆತ ತೀರಿಕೊಂಡಿರುತ್ತಾರೆ. ನಂತರ ನನ್ನ ಅತ್ತೆ ಇರಲು ಬಿಟ್ಟಿರುವುದಿಲ್ಲ.

ಆ ದಿನ ನನಗೆ ಅವರು ಹೊಡೆದಾಗ ನಾನು ಹಿಂಸೆ ತಡೆಯಲಾರದೇ ಕಾಳು ಮಾತ್ರೆಗಳನ್ನು ನುಂಗಿರುತ್ತೇನೆ. ನಂತರ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಯಾರೆಂದು ನನಗೆ ಸರಿಯಾಗಿ ನೆನಪಿಲ್ಲ. ನಂತರ ಆಸ್ಪತ್ರೆಯಲ್ಲಿ ಚಾಸಾ-3 ರಿಂದ 5 ರವರು ನನ್ನನ್ನು ಬಂದು ನೋಡಿಕೊಂಡಿರುತ್ತಾರೆ. ನನಗೆ ಜ್ಞಾನ ಬಂದಾಗ ನಾನು ವಿಕ್ಟೋರಿಯಾ ಆಸ್ಪತ್ರೆಯಲ್ಲಿದ್ದೇನು.

ನಾನು ಹಾಗೂ 1ನೇ ಆರೋಪಿ 2011 ರಲ್ಲಿ ಮದುವೆಯಾಗಿದ್ದು ನಂತರ ದಿನನಿತ್ಯ ನಮ್ಮ ಮನೆಯಲ್ಲಿ ನಾನು ಪಾತ್ರೆ ತೊಳೆಯುವ ಸಂಬಂಧ ನನ್ನ ತವರು ಮನೆಯವರು ಯಾರೂ ಬರಬಾರದು ಎಂಬ ವಿಷಯದಲ್ಲಿ ನಂತರ ನಾನು ತವರು ಮನೆಗೆ ಹೋದಾಗ ವಾಪಸ್ ಗಂಡನ ಮನೆಗೆ ಬಿಡುತ್ತಿರಲಿಲ್ಲ ಈ ವಿಚಾರಗಳಲ್ಲಿ ನನಗೆ ಹಿಂಸೆ ಕೊಟ್ಟಿರುತ್ತಾರೆ. ನಂತರ ನನ್ನ ಅಣ್ಣ ದೂರನ್ನು ಕೊಟ್ಟಿರುತ್ತಾರೆ. ನಾನು ಈ ಸಂಬಂಧ ಹೇಳಿಕೆ ಕೊಟ್ಟಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿದಾರ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸ.ಸ ಅ ರವರು ಸಾಕ್ಷಿಯನ್ನು ಪಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಸ. ಸ. ಅ. ರವರಿಂದ**

ಚಾಸಾ-1 ರವರು ದೂರು ಕೊಟ್ಟ ಮೇಲೆ ದಿಃ10.06.2018 ರಂದು ನನ್ನನ್ನು ಪೋಲೀಸರು ಠಾಣೆಗೆ ಕರೆಯಿಸಿ ನಾನು ಕೊಟ್ಟ ದಾಖಲೆಗಳಾದ ಮದುವೆ ಆಮಂತ್ರಣ ಪತ್ರಿಕೆ ಹಾಗೂ ಒಂದು ಮದುವೆಯ ಪೋಟೋ ಇವುಗಳನ್ನು ನನ್ನ ಹಾಗೂ ಚಾಸಾ-8 ಮತ್ತು 9 ರವರ ಸಮಕ್ಷಮ ಬೆಳಿಗ್ಗೆ 11 ರಿಂದ 11.30 ಗಂಟೆ ಸಮಯದಲ್ಲಿ ಅಮಾನತು ಪಡಿಸಿಕೊಂಡು ಪಂಚನಾಮೆಗೆ ನನ್ನ ಸಹಿ ಪಡೆದಿರುತ್ತಾರೆಂದರೆ ಸರಿ.

ಸಾಕ್ಷಿಗೆ ಸದರಿ ಅಮಾನತು ಪಂಚನಾಮೆ ದಾಖಲೆಯನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಸದರಿ ಅಮಾನತು ಪಂಚನಾಮೆಯ ಜೊತೆ ಹಾಜರು ಪಡಿಸಿದ ಮದುವೆ ಆಮಂತ್ರಣ ಪತ್ರಿಕೆಯ ದಾಖಲೆಯನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಅದರ ಜೊತೆ ಹಾಜರು ಪಡಿಸಿರುವ ಮದುವೆಯ ಭಾವಚಿತ್ರವನ್ನು ತೋರಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ**

ನಾನು 6ನೇ ತರಗತಿಯವರೆಗೂ ವ್ಯಾಸಾಂಗ ಮಾಡಿದ್ದೇನೆ. ನಾನು ಹಾಗೂ 1ನೇ ಆರೋಪಿ ಮದುವೆಯಾಗಿ 15 ವರ್ಷಗಳಾಗಿರುತ್ತವೆ ಎಂದರೆ ಸರಿ. 2ನೇ ಆರೊಪಿಯಾದ ನನ್ನ ಅತ್ತೆಗೆ ಹೆಣ್ಣು ಸಂತಾನವಿಲ್ಲ ಎಂದರೆ ಸರಿ. ನನ್ನ ಗಂಡ 2ನೇ ಆರೋಪಿಯ ಮೊದಲನೇ ಮಗ ಎಂದರೆ ಸರಿ. 2ನೇ ಮಗನ ಹೆಸರು ಅಶೋಕ ಎಂದರೆ ಸರಿ. ಮದುವೆಯಾದ ಮೇಲೆ ನಾನು ಹಾಗೂ ನನ್ನ ಗಂಡ ವಾಸ ಮಾಡುವ ಸಂಬಂಧ ಒಂದು ಹೆಂಚಿನ ಮನೆಯ ಸ್ವಾಧೀನವನ್ನು ಕೊಟ್ಟರು ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಗಂಡ ಹೆಚ್ಚಾಗಿ ಸದರಿ ಹೆಂಚಿನ ಮನೆಯಲ್ಲೇ ವಾಸವಿದ್ದೇವು ಎಂದರೆ ಸರಿ. ನನ್ನ ಮೈದುನ ಅಶೋಕ ಈತನ ಮದುವೆಯಾದ ನಂತರ ಆತ ಹಾಗೂ ಆತನ ಹೆಂಡತಿ ಶೀಟಿನ ಮನೆಯಲ್ಲಿ ವಾಸವಿದ್ದರು ಎಂದರೆ ಎಲ್ಲರೂ ಒಟ್ಟಾಗಿ ಒಂದೇ ಕಡೆ ವಾಸವಿದ್ದೇವು ಎಂದು ನುಡಿಯುತ್ತಾರೆ. ನನ್ನ ಮೈದುನ ನನ್ನ ಗಂಡನಿಗಿಂತಲೂ ಮುಂಚೆಯೇ ತೀರಿಕೊಂಡಿರುತ್ತಾರೆಂದರೆ ಸರಿ. ಈ ಪ್ರಕರಣ ದಾಖಲಾದ ನಂತರ ವಿಚಾರಣಾ ಹಂತದಲ್ಲಿರುವಾಗ ನನ್ನ ಗಂಡ ತೀರಿಕೊಂಡಿರುತ್ತಾರೆಂದರೆ ಸರಿ.

ನನ್ನ ಅತ್ತೆಗೆ ಒಂದು ಹೆಂಚಿನ ಮನೆ, ಒಂದು ಶೀಟಿನ ಮನೆ ಹಾಗೂ ಸರ್ಕಾರದಿಂದ ಮಂಜೂರಾಗಿರುವ ಒಂದು ಮನೆ ಇರುತ್ತದೆಂದರೆ ಸರಿ. ಊರಿನ ಪಂಚಾಯತಿಯಲ್ಲಿ ನನ್ನ ಅತ್ತೆಯ ಚಿಕ್ಕ ಸೊಸೆ ವಾಸವಿರುವ ಶೀಟಿನ ಮನೆಯನ್ನು ಬಿಟ್ಟು ಕೊಡಲು ಕೇಳಿದ್ದೇನು ಎಂದರೆ ಸರಿ. ಆಗ ಪಂಚಾಯತಿಯವರು ಯಾವುದೇ ಬದಲಾವಣೆ ಬೇಡ ನೀವು ಇರುವ ಮನೆಯಲ್ಲಿ ನೀವೇ ಇರಿ ಅವರು

ಇರುವ ಮನೆಯಲ್ಲಿ ಅವರೇ ಇರಲಿ ಎಂದು ತಿಳಿಸಿರುತ್ತಾರೆಂದರೆ ಸರಿ. ನಾನು ಶೀಟಿನ ಮನೆ ಕೊಡಲಿಲ್ಲವೆಂದು ತವರು ಮನೆಗೆ ಹೋಗಿರುತ್ತೇನೆಂದರೆ ಸಾಕ್ಷಿಯು ನಾನು ಬೆಂಗಳೂರಿನಲ್ಲಿ ಇರುತ್ತೇನೆಂದು ನುಡಿಯುತ್ತಾರೆ. ನಮಗೆ ಎರಡು ಮಕ್ಕಳು ಎಂದರೆ ಸರಿ. ಎರಡೂ ಮಕ್ಕಳು ನನ್ನ ತಂದೆ ತಾಯಿಯ ಬಳಿ ಓದುತ್ತಿದ್ದು ಈಗ ಮೊದಲನೇ ಮಗ ಪಿಯುಸಿ ಮುಗಿಸಿದ್ದು ನನ್ನ ಜೊತೆ ಬೆಂಗಳೂರಿನಲ್ಲಿರುತ್ತಾರೆ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಆರೋಪಿ ಪರ ವಕೀಲರು ಸಮಯ ಕೋರಿದ್ದು ನ್ಯಾಯದ ಹಿತದೃಷ್ಟಿಯಿಂದ ಪಾಟೀ ಸವಾಲನ್ನು ಮುಂದೂಡಲಾಯಿತು).

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**